**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 17-10 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಗಾರೆ ಕೆಲಸ ಮಾಡುತ್ತೇನೆ. ವಾರ್ಷಿಕ 70-80 ಸಾವಿರ ಆದಾಯವಿದೆ. ತಿಂಗಳಿಗೆ 2-3 ಸಾವಿರ ಖರ್ಚಾಗುತ್ತದೆ. ಆರೋಪಿಯು ಎಲ್ ಐ ಸಿ ಏಜೆಂಟ್ ಆಗಿದ್ದು, ಆ ಮೂಲಕ ಪರಿಚಯವಾಗಿದ್ದಾರೆ. ಆರೋಪಿಯಿಂದ ಎಲ್ ಐ ಸಿ ಮಾಡಿಸಿಲ್ಲ. ಆದರೆ ನನ್ನ ಸ್ನೇಹಿತರು ಮಾಡಿಸಿದ್ದು ಆದ್ದರಿಂದ ಪರಿಚಯವಾಗಿರುತ್ತಾರೆ.

ಆರೋಪಿಯು ಅಂಕೇಗೌಡರ ದೊಡ್ಡಿ. ಆರೋಪಿಯ ಕುಟುಂಬದಲ್ಲಿ ಆತನಿಗೆ ಇಬ್ಬರು ಸಹೋದರರು ಇದ್ದಾರೆ. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸುಮಾರು 20 ವರ್ಷದಿಂದ ಬ್ಯಾಂಕ್ ನಲ್ಲಿ ವ್ಯವಹರಿಸುತ್ತಿದ್ದೇನೆ. ವಿಜಯ್ ಬ್ಯಾಂಕ್, ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆಯಿದೆ. ನಾನು ಸಾಮಾನ್ಯವಾಗಿ ನನ್ನ ವ್ಯವಹಾರವನ್ನು ನಗದು ರೂಪದಲ್ಲಿ ಮಾಡುತ್ತೇನೆ. ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಸಾಲ ನೀಡಿಲ್ಲ. ಆರೋಪಿಯವರು ನನಗೆ ಪರಿಚಯವಾಗಿ ಸಾಲ ಪಡೆದಾಗ ಅನುಕೂಲವಾಗಿದ್ದರು. ಸದರಿಯವರು ಎಷ್ಟು ಸಂಪಾದನೆ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿಯವರ ದಿನಸಿ ಅಂಗಡಿಯು ಕೆ ಎಂ ದೊಡ್ಡಿಯ ಭಾರತೀ ನಗರದಲ್ಲಿತ್ತು. ಈಗ ಇಲ್ಲ. ದಿಃ20-11-2017 ರಲ್ಲಿ ಆರೋಪಿ ಸಾಲ ಕೇಳಿರುತ್ತಾರೆ. ಆರೋಪಿಯು ತನ್ನ ಎಲ್ ಐ ಸಿ ಕಚೇರಿಯಲ್ಲಿ ಸಾಲ ಕೇಳಿರುತ್ತಾರೆ. ಸದರಿ ವೇಳೆಯಲ್ಲಿ ನಾನು ಮತ್ತು ರಾಜು ಇದ್ದೆವು. ದಿಃ25-11-2017 ರಂದು ಸಾಲ ನೀಡಿರುತ್ತೇನೆ.

ಸದರಿ ಸಾಲವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆಗ ನಾನು ಮತ್ತು ನನ್ನ ಹೆಂಡತಿ ಇದ್ದೆವು. ಸದರಿ ವೇಳೆಯಲ್ಲಿ 3,70,000/- ನೀಡಿದ್ದೇನೆ. 500 ರೂ ಮುಖಬೆಲೆಯ 370 ನೋಟುಗಳನ್ನು ನೀಡಿದ್ದೇನೆ ಆಗ ಸಂಜೆ ಸುಮಾರು 06-00 ಗಂಟೆಯಾಗಿತ್ತು. ಆರೋಪಿಗೆ ಸಾಲ ನೀಡಲು ಚೀಟಿ ಹಣದಿಂದ, 10 ವರ್ಷದಿಂದ ಕೂಡಿ ಹಾಕಿದ ಹಣದಲ್ಲಿ ನೀಡಿರುತ್ತೇನೆ. 2 ಲಕ್ಷಕ್ಕೆ ಚೀಟಿ ಹಾಕಿದ್ದೆ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು